Shivam Guruji
NADI ASTROLOGY

“ನಾಡಿ ಜ್ಯೋತಿಷ್ಯ ಪ್ರವೀಣೆ” ಬಿರುದಾಂಕಿತ

# ಶ್ರೀಮತಿ ರೇಖಾ ಚಂದ್ರಶೇಖರವರು

**ಬರೆದ ಅನುಭವದ ಲೇಖನಗಳು**


**GURUKULA**
No 547, 4th cross, 7th main
R.P.C layout, Vijayanagar
Bangalore -40

**Call: 7676466466   www.shivamguruji.com**

# ಜಾತಕ ವಿಶ್ಲೇಷಣೆ–01

| | | | |
|---|---|---|---|
| | | ಕುಜ | ಶುಕ್ರ<br>ರವಿ |
| ಕೇತು | ಸ್ತ್ರೀ ಜಾತಕ.<br><br>6. ಜುಲೈ 79 | | ಬುಧ<br>ಗುರು |
| | | | ಶನಿ<br>ರಾಹು |
| | ಚಂದ್ರ | | |

ಈ ಜಾತಕೀಯು ಮೊದಲಿನಿಂದಲೂ ವ್ಯಾಪಾರಿ ಮಹಿಳೆ ಆಗಬೇಕೆಂಬ ಅಪೇಕ್ಷೆ ಇದ್ದವಳು. ಅದಕ್ಕಾಗಿ 4-5 ವರ್ಷದಿಂದ ಪ್ರಯತ್ನ ಮಾಡಿ ಮಾಡಿ ಒದ್ದಾಡುತ್ತಿದ್ದಾಳೆ.

**ಕಾರಣ** :–

ಗೋಚಾರದ ರಾಹು ೨೦೧೨ – ೧೩. ಶುಕ್ರ ರವಿ ಯ ಮೇಲೆ ೨೦೧೪ – ೧೫ ರಲ್ಲಿ ಬುಧ ಗುರು ನ ಮೇಲೆ

ಪ್ರಭಾವ ಬೀರುವುದರಿಂದ ಗೊಂದಲ ಏರ್ಪಟ್ಟಿರುತ್ತೆ.

ಈ ಜಾತಕಿಗೆ ಸ್ವತಂ ಉದ್ಯೋಗಕ್ಕೆ ಕಾರಣನಾದ ರವಿ ಶುಕ್ರ 'ಬುಧ' ನ ಮನೆಯಾದ ಮಿಥುನದಲ್ಲೇ ಇರುವುದರಿಂದ ಈಕೆ ಯಶಸ್ವಿ ಆಗುತ್ತಾಳೆ.

**ಕಾರಣ** :– ರಾಹು ಕೇತು ವಿನ axis ನೊಳಗೆ

- **ಕುಜ** = ಹ್ಯಾಂಡಲಿಂಗ್ ಮಾಡುವ.
- **ಶುಕ್ರ** = ಪ್ರಚಾರದ ರೀತಿ, ಉಪಯೋಗಿಸುವ ಕಲೆ,
- **ರವಿ** = ಅವಕಾಶಗಳಸುವ ಬಗೆ,

ಉಚ್ಚ ಗುರು = ಜನರನ್ನು ಪಳಗಿಸುವ ಕಲೆ ಅರಿತಿರುತ್ತಾಳೆ. ಆನರ ಬೆಂಬಲ ಗಳಸುವ ಜ್ಞಾನ ಈಕೆಗಿದೆ. ಕಾರಣ ಗುರು ಜೊತೆ ಬುಧ ಆದರೆ ಜಲದಲ್ಲಿ ಬುಧ ಇರುವುದರಿಂದ ಅವಶ್ಯಕತೆಗಿಂತ ಹೆಚ್ಚು ಮಾಡುತ್ತಾಳೆ. ಆಗ ಅಧಿಕ ಆಯ್ಕೆ ಕೊಟ್ಟು ವ್ಯಾಪಾರದಲ್ಲಿ ತೊಂದರೆಗೆ ಒಳಗಾಗುತ್ತಾಳೆ. ಆಗ ಹೇಳಿದಂತೆ ನಡೆಯಬೇಕಾಗುತ್ತದೆ. (ರವಿ) ಒಪ್ಪಿಕೊಂಡಿರುವುದಕ್ಕಿಂತ ಹೆಚ್ಚು ಮಾಡೋದು (ಶುಕ್ರ ರಾಹು ನಕ್ಷತ್ರದಲ್ಲಿ ಇರೊದರಿಂದ)ಬುಧ ಗುರು ಒಟ್ಟಿಗೆ ಇರುವುದರಿಂದ ಜಿಪುಣ ಸ್ವಭಾವದಂತೆ ವರ್ತಿಸುತ್ತಾಳೆ.

**ಕಾರಣ** :–

ಆ ವರ್ತನೆಗೆ ಕುಜ ನ (೧೧ ನೇ ಮನೆ) ಸಪೋರ್ಟ್ ಸಿಗುತ್ತದೆ. ಆದರೆ ಮೂಲತಹ ಅಧಿಕ ಖರ್ಚುಗಾರ್ತಿ (ಶುಕ್ರ ರವಿ) ಇಲ್ಲಿ ರಾಹು ಕೇತು ವಿನ ಇನ್ನೊಂದು axis ನಲ್ಲಿ ಚಂದ್ರ ಇರುವುದರಿಂದ ಇನ್ನೊಬ್ಬರಿಗೆ ತಿನ್ನಿಸಿ, ಅವರನ್ನು ಮೆಚ್ಚಿಸಿ, ಉಬ್ಬಿಸುವ ಕೆಲಸ ಮಾಡದೇ ಇರುವುದರಿಂದ ವ್ಯಾಪಾರದಲ್ಲಿ ಚಂದ್ರ ಸಹಾಯ ಮಾಡಲ್ಲ.

ಈಕೆಯು ಯಶಸ್ವಿ ಆಗಬೇಕಾದರೆ net work ಮೂಲಕ ಕೆಲಸಗಾರರನ್ನು ಸಂಗ್ರಹ ( ಶನಿ ರಾಹು ಇರುವುದರಿಂದ) ಮಾಡಿ ಅವರಿಗೆ attration point (ಬುಧ) ಏನಾದರೂ ಇದ್ದು, ಮಧ್ಯಮ ವಯಸ್ಸಿನವರನ್ನು ಕೆಲಸಕ್ಕೆ ತೆಗೆದುಕೊಂಡು ಅವರ ಮೇಲೆ invest (ಗುರು) ಮಾಡುವುದರಿಂದ manufacturing ಗೆಲ್ಲಬಹುದು ಮತ್ತು. ಈಕೆಯೇ customer (ಶುಕ್ರ ರವಿ) end ನಲ್ಲಿ ಮಾತಾಡಿ marketing ಮಾಡುವುದರಿಂದ ಈಕೆ ಗೆಲ್ಲುತ್ತಾಳೆ.

# ಜಾತಕ ವಿಶ್ಲೇಷಣೆ-02

| | | | |
|---|---|---|---|
| | ರಾಹು | ಶುಕ್ರ | ರವಿ<br>ಕುಜ |
| ಚಂದ್ರ | ಪುರುಷ . | | ಬುಧ |
| ಗುರು | 6.7.85 | | |
| | | ಕೇತು<br>ಶನಿ | |

ಈ ಜಾತಕನು ೨೦ ಜಿನಿಯರ್ ಆಗಿದ್ದು (ಕುಜ ಶನಿ) ರಾಹು ಕೇತು axis ನಲ್ಲಿ ಶುಕ್ರ ಶನಿ ಇದ್ದು.

- ರವಿ = ಅವಕಾಶ ಪಡೆವ,
- ಶುಕ್ರ = ಬಳಸುವ ಕಲೆ
- ಬುಧ = ಜಲದಲ್ಲಿ ಇದ್ದು ಮ್ಯಾನಿ ಪ್ಲೇಟ್

ಮಾಡುವ ಜ್ಞಾನವಿದ್ದು

ಇದೆಲ್ಲಾವನ್ನು ತನ್ನ ವೈತ್ತಿಯಲ್ಲಿ ಬಳಸಿಕೊಂಡಿದ್ದಾನೆ. ಆದರೆ ಯಾವಾಗಲು ಹಣಕಾಸಿನ ಸಮಸ್ಯೆ (ನೀಚ ಗುರು) ಎನ್ನುತ್ತಾನೆ.

ದುಡಿಮೆ ಚೆನ್ನಾಗಿದ್ದಾಗ ಸಹ ಈತನಿಗೆ ಈ ಸಮಸ್ಯೆ ಇಲ್ಲಿ ರಾಹು ಕೇತು ವಿನ ಇನ್ನೊಂದು ನಲ್ಲಿ ಚಂದ್ರ ಗುರು ಇದ್ದು (ಗುರು) ಜಾತಕನು ಮತ್ತು ಆತನ ಮನಸ್ಸು (ಚಂದ್ರ) ಸಹಕರಿಸುವುದಿಲ್ಲ. ಈ ವೃತ್ತಿಯಲ್ಲಿ ಮತ್ತು ಜಾತಕನ ಜಾತಕದಲ್ಲಿ ಆಗಾಗ ಚಲನೆಯಿಂದ ಜಾತಕನ ಅಭಿವೃದ್ಧಿಯು (ಚಂದ್ರ ರವಿ ಶನಿ) ಆದರೆ ಜಾತಕನು ಹೊರ ದೇಶದ (ಚಂದ್ರ ರಾಹು) ಅವಕಾಶ ಬಂದರೂ ಸಹ ಹೊರ ಹೋಗಲು ಒಪ್ಪದೇ ಇರೋದು ಮತ್ತು ಗುರು ಶುಕ್ರ ಸಂಯೋಗದಂತೆ ಸವೆಯದ ಕರ್ಮ ಮತ್ತು ಸ್ವಯಂ ಕೃತ ಅಪರಾಧದಿಂದ ಅಭಿವೃದ್ಧಿ ಕುಂಠಿತ (ರವಿ ಕೇತು)

professional s kills + in came expense. = finance.

| | | | |
|---|---|---|---|
| ಇಂಜಿನಿಯರ್ ಆಗಿ ಇರೋ ಜ್ಞಾನ ಇದೆ. | ದುಡಿಮೆ ಇದೆ ಆದರೆ (ಗುರು ಶುಕ್ರ ಅನವಶ್ಯಕ ತೊಂದರೆ ಮಾಡಿಕೊಡು | ಖರ್ಚು ಅನವಶ್ಯಕ ಮಾಡಿ ಕೊಳ್ಳುವುದು | ದುಡಿತಕ್ಕೆ ತಕ್ಕ ಹಾಗೆ ಬದುಕದೆ ಒದ್ದಾಡುತ್ತಿರುವುದು. |

ಬುಧ + ಶನಿ+ ಕೇತು = ಸಂಯೋಗದಿಂದ ತಾನು ಕೆಲಸ ಮಾಡದೆ ಇನೊಬ್ಬರ ಬಳಿ ಕೆಲಸ ಮಾಡಿಸಬೇಕು. ಅದಕ್ಕೆ ೧೧ ರಲ್ಲಿ ಶುಕ್ರ ನ ಸಂಬಂಧ ಬಂದಿರುವುದರಿಂದ ಒಳ್ಳೆಯದು ಆದರೆ ಪ್ರಯೋಗದಲ್ಲಿ ಸ್ಯಾಂಪಲ್ ಅಂತ ಸ್ವಲ್ಪ.ಕೊಟ್ಟು ನಂತರ ಹೆಚ್ಚು ಪಡೆಯಬಹುದು.

ರೆಮಿಡಿ ಅಂದ್ರೆ ಕಂಪನಿಯಲ್ಲಿ manufaring ನಲ್ಲಿ ಕೆಲಸ ಮಾಡಿಸಿ, ಕೆಲಸ ತೋರಿಸಿ ನಂತರ ಬಡ್ತಿ, ಅಧಿಕ ಅಧಿಕಾರ, ಪಡೆಯುವುದರಿಂದ ವ್ಯಕ್ತಿ ಯಶಸ್ಸು ಹೊಂದುತ್ತಾನೆ.

# ಜಾತಕ ವಿಶ್ಲೇಷಣೆ-03

<table>
<tr><td></td><td>ಕುಜ<br>(ವಕ್ರಿ)</td><td></td><td>ಕೇತು<br>ಶನಿ<br>(ವಕ್ರಿ)</td></tr>
<tr><td></td><td colspan="2" rowspan="2">ಪುರುಷ<br>5. 11. 73</td><td></td></tr>
<tr><td>ಚಂದ್ರ<br>ಗುರು</td><td></td></tr>
<tr><td>ರಾಹು<br>ಶುಕ್ರ</td><td>ಬುಧ<br>(ವಕ್ರಿ)</td><td>ರವಿ</td><td></td></tr>
</table>

ಈ ಜಾತಕನು ಕೇಂದ್ರ ಸರ್ಕಾರಿ ವೃತ್ತಿ (ಶನಿ ರವಿ ಬುಧ) ಮಾಡುತ್ತಿದ್ದು ಈ ಜಾತಕದಲ್ಲಿ ರಾಹು ಕೇತುವಿನ ಒಂದು axis ನಲ್ಲಿ ಶನಿ, ರವಿ, ಬುಧ, ಶುಕ್ರ

ಇನ್ನೊಂದು axis ನಲ್ಲಿ ಗುರು ಚಂದ್ರ, ಕುಜ ಇದೆ.

- ಬುಧ (ವಕ್ರಿ) = ವಕ್ರಿಯಾಗಿ ಜಲದಲ್ಲಿ ಇರುವುದರಿಂದ ಕೆಲಸಕ್ಕೆ ಬೇಕಾದ ಜ್ಞಾನ ಇಲ್ಲ.
- ರವಿ = ನೀಚ ರವಿಯಿಂದ ಅಲ್ಲದೆ ರಾಹು ಕೇತು ವಿನಿಂದ ಬ್ಲಾಕ್ ಆಗಿರುವುದರಿಂದ ಹೆಸರು ಕೀರ್ತಿ ಇಲ್ಲದೆ ಒದ್ದಾಟ.
- ಶನಿ (ವಕ್ರಿ) = ತನ್ನ ಕೆಲಸ ಮಾಡಲು ಸುತ್ತ ಮುತ್ತ ಕೆಲಸಗಾರರು ಸಿಗದೆ ತಾನೇ ಮಾಡಲು ಕಷ್ಟಪಟ್ಟು (ಜ್ಞಾನ ಇಲ್ಲದೆ) ಮಾಡಬೇಕಾಗಿದೆ.
- ಶುಕ್ರ = ತಾನು ಮಾಡಿರುವ ಒಂದು ಕೆಲಸವೇ ದೊಡ್ಡದು ಎಂದು ಬಿಂಬಿಸುವುದು.ವೃತ್ತಿಯಲ್ಲಿ ತೊಂದರೆ ಆಗಿದೆ.

ಇನ್ನೊಂದು ನಲ್ಲಿ ಗುರು = ತನ್ನ ಸುತ್ತಮುತ್ತದವರಿಸಿ ಆಹಾರ, ಪಾನೀಯ

ಚಂದ್ರ = ತಿನ್ನಿಸಿ, ಕಾರಿನಲ್ಲಿ ಒಡಾಡಿಸಿ ಜನರನ್ನು ಚೆನ್ನಾಗಿ ಪಳಗಿಸಿ ಕೊಳ್ಳುತ್ತಾರೆ.

ಆದರೆ ವಕ್ರಿ ಕುಜ ನಿಂದ ಮಾತಿನಲ್ಲ, ನಡವಳಿಕೆಯಲ್ಲಿ ಆತಂಕ ಅಪಾಯದಿಂದ ಮತ್ತು ಸಮಯಾಚಿತ ಕೆಲಸ ಕಾರ್ಯ ಮಾಡದೇ ಸಮಯಾನುಸಾರ ಧೈರ್ಯ ಮಾಡದೆ ಇತರರು ಎಲ್ಲಾ ಸಂದರ್ಭದಲ್ಲಿ ಜೊತೆಗೆ ನಿಲ್ಲುವುದಿಲ್ಲ.

ಒಟ್ಟಿನಲ್ಲಿ ಈ ಜಾತಕನು ಒಂದಲ್ಲ ಒಂದು ರೀತಿ saffer ಆಗುತ್ತಿರುತ್ತಾರೆ. (ವೃತ್ತಿ ವಿಚಾರದಲ್ಲಿ).

ಸ್ವಂತ ವ್ಯಾಪಾರಕ್ಕೆ ಕಾರಕ ಗ್ರಹಗಳು ಇವರಿಗೆ ಸಹಾಯ ಮಾಡದೇ ಇರುವುದರಿಂದ ಮಾಡುತ್ತಿರುವ ಕೆಲಸವನ್ನೆ ಮುಂದುವರೆಸಿಕೊಂಡು ಹೋಗುವುದು ಒಳ್ಳೆಯದು.

# ಜಾತಕ ವಿಶ್ಲೇಷಣೆ-04

| | | | |
|---|---|---|---|
| | ಕುಜ | | ಕೇತು ಶನಿ (ವಕ್ರಿ) |
| | ಪುರುಷ **28 nov 1973** | | |
| ಗುರು | | | |
| ಶುಕ್ರ ಚಂದ್ರ ರಾಹು | ರವಿ | ಬುಧ | |

Professinal  past analysis.

ಈ ಜಾತಕನು ಸ್ವಂತ ಉದ್ದಿಮೆ ಮಾಡುತ್ತೇನೆ ಎಂದು ಬಹಳವಾಗಿ ಪ್ರಯತ್ನ ಪಟ್ಟು ಸಾದ್ಯವಾಗದೇ ಬೇರೆಡೆ ಕೆಲಸಕ್ಕೆ ಸೇರಿಕೊಂಡ.

ಕಾರಣ :- ಒಂದು ನಲ್ಲಿ ರವಿ ಬುಧ ಶನಿ ಇದ್ದು ಇನ್ನೊಂದು  axis ನಲ್ಲಿ ಚಂದ್ರ ಶುಕ್ರ ಗುರು ಕುಜ ಇರುವುದರಿಂದ

**ರವಿ** = ಆಡಳಿತ ನಡೆಸುವ

**ಬುಧ** = ಜ್ಞಾನವಿದೆ ಎಂಬ ಭಾವನೆಯಿಂದ ಸ್ವಂತ ಉದ್ದಿಮೆಯನ್ನು ಮಾಡುವ ಪ್ರಯತ್ನ ಮಾಡಿರುತ್ತಾನೆ.

ಆದರೆ ಅದಕ್ಕೆ ಆತನ ದೇಹ, ಧೈರ್ಯ = ಕುಜ ಮತ್ತು ಜನ ಬೆಂಬಲ = ಗುರು ಸಿಗಲಿಲ್ಲ.

ಈಗಾಗಲೇ ಸಾಲದಲ್ಲಿ (ಶುಕ್ರ ಚಂದ್ರ) ಇದ್ದು ಪ್ಯಾಕ್ಟರಿ ತೆಗೆದುಕೊಳ್ಳಲು (ರಾಹು) ಮುಂದಾಗಿ ನಂತರ ತಾನೇ ಪ್ಯಾಕ್ಟರಿ ಕೆಲಸಗಾರನಾಗಿ (ಶನಿ ವಕ್ರಿ) ಸೇರಿಕೊಂಡನು.

ನಂತರ ಕೆಲಸ ನಿಮಿತ್ತ ಹೊರದೇಶಗಳಿಗೆ ಹೋಗಿ ಬಂದು ( ಶುಕ್ರ ಚಂದ್ರ ರಾಹು)

ಹಣ ಮಾಡಿಕೊಂಡು ಒಂದು ಹಂತಕ್ಕೆ ಬಂದಿದ್ದಾರೆ.

ಈ ಜಾತಕನಿಗೆ ಶುಕ್ರ ಚಂದ್ರ ರಾಹು ಗುರು ಕುಜ ಒಂದು  axis ನಲ್ಲಿ ಇರುವುದರಿಂದ  ( ರಾಹು) ನಲ್ಲಿ ಜನರಿಗೆ ಹಣವನ್ನು ತೊಡಗಿಸುವಂತೆ ( ಶುಕ್ರ) ಮನೊಲಿಸಿ, ತಾನಿರುವ ಸ್ಥಳಬಿಟ್ಟು (ಚಂದ್ರ) ಬೇರೆಕಡೆ ವ್ಯಾಪಾರ ಮಾಡುವುದು.

ಆದರೆ ಇದಕ್ಕೆ

ಶ್ರವಣ ನಕ್ಷತ್ರದಲ್ಲಿರುವ ಹುರು ಕಷ್ಟಪಡಲು ಒಪ್ಪಲ್ಲ ಅಲ್ಲದೆ ಆಶ್ಲೇಷ ನಕ್ಷತ್ರದಲ್ಲಿರುವ ಕುಜ ಆ ಜ್ಞಾನವನ್ನು ಮತ್ತು ಧೈರ್ಯವನ್ನು ಕೊಡುವುದಿಲ್ಲ.

# ಜಾತಕ ವಿಶ್ಲೇಷಣೆ-05

## ಹೆಂಡತಿ

| | | | |
|---|---|---|---|
| | | ರಾಹು | |
| ಕುಜ | ರಮ್ಯ | | |
| ಶುಕ್ರ ಚಂದ್ರ | 24 dce 1984 | | |
| ಗುರು ರವಿ | ಕೇತು ಬುಧ ಶನಿ | | |

ಈ ಜಾತಕೀಯ ಜಾತಕದಲ್ಲಿ ಬುಧ ಜಲದಲ್ಲಿ ಶನಿ ಕೇತುವಿನೊಂದಿಗೆ ಇರುವುದರಿಂದ ವ್ಯಾಪಾರ ಜ್ಞಾನ, ವೃತ್ತಿಜ್ಞಾನ ಇಲ್ಲದಂತಾಗಿದೆ. ಅಲ್ಲದೆ ಜಾತಕಿಗೆ ಅತಿಯಾದ ಆಸೆ ಮತ್ತು ಅತಿ ಖರ್ಚು ಮಾಡುವ ಸ್ವಭಾವದವಳು. ಮನಸ್ಸಿಗೆ ಬಂದ ಭೋಗ ವಸ್ತುಗಳು ಖರೀದಿಸುವ ಸ್ವಭಾವದವಳೂ. ಇದನ್ನು ಹಿಡಿತದಲ್ಲಿ ಇಟ್ಟು ಕೊಳ್ಳಬೇಕು. ಹಿಂದೆ ಈ ವಿಚಾರದಿಂದಲೇ ಹಣವನ್ನು ಲಾಸ್ ಮಾಡಿಕೊಂಡಿರುತ್ತಾಳೆ. ಆದರೆ ಜನಬೆಂಬಲ, ಮತ್ತು ಅವಕಾಶ ಪಡೆದರೀತಿ ಪರಿಸ್ಥಿತಿಯನ್ನು ಧ್ಯಾಂಡಲ್ ಮಾಡುವ ರೀತಿ ಗೊತ್ತಿದೆ.

ಹಾಗೆಯೇ ಅವಳ ದೌರ್ಬಲ್ಯವನ್ನೇ ಇತರರ ದೌರ್ಬಲ್ಯ ಮಾಡಿ ಅದನ್ನು ತಾನು ಬಳಸಿಕೊಳ್ಳುವ ಕಲೆ ಗೊತ್ತಿದೆ. ಹಾಗಾಗಿ ಗಂಡನ ವ್ಯವಾಹಾರದಲ್ಲಿ ಮೆಂಟೇನ ಮಾಡುವ, ಅಂದಚಂದದಲ್ಲಿ ಜನರನ್ನು ಆಕರ್ಷಿಸುವ ಮತ್ತು ಬರುವ ಅವಕಾಶವನ್ನು ಬಳಸುವ ಕಲೆ. ಈಕೆಗೆ ತಿಳಿದಿರುವುದರಿಂದ ಇದರಿಂದ ಈಕೆ ಯಶಸ್ವಿಯಾಗಬಹುದು.

ಈ ಜಾತಕದಲ್ಲಿ ಜಾತಕನಿಗೆ ರಾಹು ಕೇತುವಿನ ಜೊತೆ ಶನಿ ರವಿ ಇದೊದರಿಂದ ಕರ್ಮವೇ ಇಲ್ಲದಂತಾಗಿ ಯಾವುದೇ ಅವಕಾಶವಿಲ್ಲದಂತಾಗಿದೆ.

ಹಾಗಾಗಿ ಏನನ್ನು ಮಾಡಲೂ ಆತನ ದೇಹ ಮತ್ತು ಮನಸ್ಸು ಸಹಕರಿಸುತ್ತಿಲ್ಲ.

ಅಲ್ಲದೆ ಪೃಥ್ವಿಯಲ್ಲಿ ಇರುವ ಗುರುವಿನಿಂದಾಗಿ ಬಲ ಹೀನನಾದ ಗುರು ಯಾವುದೇ ಮಾರ್ಗದರ್ಶನ, ಜನಬೆಂಬಲ, ಹಣ ವಿಚಾರದಲ್ಲಿ ಸಹಾಯಕನಾಗಿಲ್ಲ ಶುಕ್ರ ನೂ ಸಹಾ ವಕ್ರಿಯವಾಗಿ ರವಿ ಯನ್ನು ಸಂಯೋಗ ಹೊಂದುವುದರಿಂದ ಅನವಶ್ಯಕ ಸ್ಥಾನಮಾನಕ್ಕೆ ಖರ್ಚು ಮಾಡಿ ಜೀವನದಲ್ಲಿ ಉತ್ಸಾಹ ಹೀನನಾಗಿದ್ದಾನೆ.

ಆದರೆ ಬುಧ ನೀಚಾನಾದ ಕಡೆ ಹೋಗುತ್ತಿದ್ದಾರೆ ಬುಧ ಪೃಥ್ವಿಯಲ್ಲಿ ಬಲಯುತ ಹಾಗಾಗಿ ಜ್ಞಾನವನ್ನು ಹೊಂದಿದವನಾಗಿದ್ದಾನೆ.

ಆದರೆ ವಕ್ರ ಶುಕ್ರ ನಿಂದ ಅದನ್ನು ಬಳಸುವ ರೀತಿ ಯಲ್ಲಿ ಮಾರ್ಗದರ್ಶನವಿಲ್ಲದಂತಾಗಿದೆ.

ಇದು ಈತನ ಯಶಸ್ವಿಗೆ ತೊಂದರೆ ಯಾಗಿದೆ.

ಅಲ್ಲದೆ ಇಬ್ಬರಿಗೆ ತರಬೇತಿ ಹೊಂದಿದ  ಸಿಗುವುದಿಲ್ಲ.

**ಕಾರಣ** :-

ಶನಿ ಕೇತು ಬುಧ ನ ಜೊತೆ ಮತ್ತು ಬುಧನ ಮನೆಯಲ್ಲಿ ಗಂಡನ ಜಾತಕದಲ್ಲಿ

**ಇದಕ್ಕೆ ಮೊದಲ ಪರಿಹಾರವೆಂದರೆ**

ಜ್ಞಾನ ವಿಚಾರವಾಗಿ ಸಮಾಜಕ್ಕೆ ಸೇವೆಯನ್ನು ಮಾಡುವುದು.

**ಯಸಸ್ವಿನ ಪರಿಹಾರವೆಂದರೆ**

ಆ ಭಗವಂತನೇ ಇವರಿಬ್ಬರನ್ನು ಜೊತೆಗೂಡಿಸಿದ್ದಾನೆ.

ಅದರಂತೆ ಆತನಲ್ಲಿರುವ ಜ್ಞಾನವನ್ನು ಬಳಸಿ,

ಆಕೆಯಲ್ಲಿರುವ ಅವಕಾಶ, ಪ್ರಚಾರ ಕಲೆ, ಜನರನ್ನು ಪಳಗಿಸುವ ಕಲೆಯನ್ನು ಮತ್ತು ಸಮಯ ಸಂದರ್ಭವನ್ನು ಸರಿಯಾಗಿಸುವ ಅವಳ ಜಾಣ್ಮೆಯನ್ನು ಬಳಸಿಕೊಂಡು ಇಬ್ಬರ ಜೀವನದಲ್ಲಿ ಯಶಸ್ಸು ಹೊಂದಬಹುದು.

# ಜಾತಕ ವಿಶ್ಲೇಷಣೆ–06

## ರವಿ ಮೇಲೆ ಗೋಚಾರದ ರಾಹು ಪ್ರಭಾವ

| | | | |
|---|---|---|---|
| | | ಶುಕ್ರ | ರವಿ ಚಂದ್ರ |
| ರಾಹು | Male 27.6.2006 | | ಬುಧ ಶನಿ ಕುಜ |
| | | | |
| | | ಗುರು(ವಕ್ರಿ) | ಕೇತು |

೧. ಈ ಜಾತಕದಲ್ಲಿ ಕುಜ ೩,೫ ರಲ್ಲಿ ರಾಹು ಕೇತು ಮಧ್ಯೆ ಬಂದಿದ್ದು ಅಲ್ಲದೆ ಈ ಘಟನೆಗೆ ಶನಿ ಅಲ್ಲೇ ಇದ್ದು ಸಾಕ್ಷಿಯಾಗಿದ್ದಾನೆ. ಹಾಗಾಗಿ ಜಾತಕನ 10-11 ನೇ ವಯಸ್ಸಿನಲ್ಲಿ ಗಾಯದಿಂದ, (ಕುಜ) ನರಗಳಿಂದ ತೊಂದರೆ (ಬುಧ) ಅಥವಾ ಹಳೆಯ ಗಾಯ ಅಥವಾ ನೋವಿನಿಂದ (ಶನಿ) ತೊಂದರೆ ಅನುಭವಿಸುತ್ತಾನೆ.

ಅದರಂತೆ 2017 ರ ಮೊದಲ ವಾರದಲ್ಲಿ ಬಿದ್ದು ಕಾಲಿಗೆ ಪೆಟ್ಟಾಗಿ ನರಗಳ ಹೊರಳುವಿಕೆಯಿಂದ 1 ತಿಂಗಳು ಕಾಲ ಬ್ಯಾಂಡೇಜ್ ಮತ್ತು ಫಿಜಿಯೋಥೆರಪಿ ತಿಳಿಸಿದ್ದಾರಂತೆ.

ಇಲ್ಲಿ ಭೃಗುಬಿಂದು ಪ್ರಕಾರ ನೋಡಿದಾಗಲು ಗೋಚಾರದ ಶನಿ ಯು ವೃಶ್ಚಿಕ ಬಿಟ್ಟು ಹೊರಡುವಾಗ ಘಟನೆ ನಡೆದಿದೆ. ಅಲ್ಲದೆ ಆ ವೇಳೆಗೆ ಗೋಚಾರರದ ರಾಹು ಮಿಥುನದಲ್ಲಿ ಇರುವ ರವಿ ಚಂದ್ರ ನನ್ನು ಸಂಧಿಸುತ್ತಾನೆ. ಆ ವೇಳೆಗೆ ತಂದೆಯ ಆರೈಕೆ ಇಲ್ಲದಂತಾಗಿ, ಮತ್ತು ಯಾವಾಗಲೂ ತೋರಿಸುವ ಡಾಕ್ಟರ್ (ರವಿ) ಊರಿನಲ್ಲಿ ಇಲ್ಲದಿದ್ದುದರಿಂದ (ಚಂದ್ರ) ತೊಂದರೆ ಅನುಭವಿಸಿರುತ್ತಾರೆ. ಆ ಸಮಯದಲ್ಲಿ ತಂದೆ (ರವಿ) ವಿದೇಶದಲ್ಲಿ ( ರಾಹು) ಕೆಲಸದ ನಿಮುತ್ತ (ಶನಿ) ಹೋಗಿರುತ್ತಾರೆ. (ಚಂದ್ರ)

# ಜಾತಕ ವಿಶ್ಲೇಷಣೆ–07

**ರವಿ ಮೇಲೆ ಗೋಚಾರದ ರಾಹು ಪ್ರಭಾವ**

| | | | |
|---|---|---|---|
| | ಕೇತು | ಗುರು | |
| | 31aug 76 male | | ಶನಿ |
| | | | ರವಿ |
| | | ರಾಹು ಚಂದ್ರ | ಶುಕ್ರ ಕುಜ ಬುಧ |

ಈ ಜಾತಕನು ವಿದೇಶದಲ್ಲಿ ಇದ್ದು {40 ವರ್ಷದವನಾದುದ್ದರಿಂದ ಶನಿ ಸಿಂಹದಲ್ಲಿ ಮತ್ತು ರವಿ ಸಿಂಹದಲ್ಲೋ ಇದ್ದು ಕಾಲ್ಪನಿಕ ರಾಹು ಕೂಡ ಸಿಂಹಕ್ಕೆ ಬಂದಿದ್ದು ಆ ಗ್ರಹಗಳಿಗೆ ಚಂದ್ರ ನ ಸಂಬಂಧ ಇರುವುದರಿಂದ ವಿದೇಶದಲ್ಲಿ ಕೆಲಸ.}

2016 ರಲ್ಲಿ ತಂದೆಯ ಆರೋಗ್ಯ ವಿಚಾರದಲ್ಲಿ 8-10 ತಿಂಗಳು ಒದ್ದಾಡಿ, ತಿಂಗಳುಗಟ್ಟಲೆ ಕೆಲಸಕ್ಕೆ ರಜೆ ಪಡೆದು ಇಲ್ಲಿಗೆ ಬಂದು ಆಪರೇಶನ್ ಮಾಡಿ ಉಪಚರಿಸುತ್ತಾರೆ. ಆದರೆ "ಒಬ್ಬನೇ ಮಗ ನೋಡಿಕೊಳ್ಳದೆ ದೇಶ ಬಿಟ್ಟು ಹೋಗಿದ್ದಾನೆ" ಎಂಬ ಕೆಟ್ಟ ಹೆಸರನ್ನು ಪಡೆದು, ಹಣವನ್ನು ಹೆಚ್ಚು ಹೆಚ್ಚು ಖರ್ಚು ಮಾಡಿ (ದೇಶದಿಂದ ದೇಶದ ಓಡಾಟಕ್ಕೆ) ಮಾನಸಿಕ ವಾಗಿ ಹಿಂಸೆ (**ಚಂದ್ರ + ರಾಹು**) ಅನುಭವಿಸಿರುತ್ತಾರೆ.

ಈ ಜಾತಕದಲ್ಲಿ ಗೋಚಾರದ ರಾಹು ಜಾತಕನ ಹೆಸರನ್ನು (ರವಿ) ತಂದೆಯ ಆರೋಗ್ಯವನ್ನು (ರವಿ) ಓಡಾಟವನ್ನು (ರವಿ ಚಂದ್ರ) ಮಾಡಿಸಿ ತೊಂದರೆ ಕೊಟ್ಟಿರುತ್ತಾರೆ.

ಸ್ಥಿತ ರವಿಯ ಮೇಲೆ ಗೋಚಾರದ ರಾಹು ಬಂದಾಗ ವ್ಯಕ್ತಿಯ ಜಾತಕದ ಅನುಸಾರ ಆರೋಗ್ಯ, ತಂದೆ, ಅಭಿವೃದ್ಧಿ, ಮಗ, ಸರ್ಕಾರದಿಂದ ತೊಂದರೆ, ಅವಕಾಶ ಹೀನತೆ ಹೀಗೆ ರವಿ ಕಾರಕತ್ವದ ತೊಂದರೆಗಳನ್ನು ಸಡನ್ ಆಗಿ ಅನುಭವಿಸುತ್ತಾರೆ.

# ಜಾತಕ ವಿಶ್ಲೇಷಣೆ–08

## ರವಿಯ ಮೇಲೆ ಗೋಚಾರದ ರಾಹು ಪ್ರಭಾವ

| | | | |
|---|---|---|---|
| ಗುರು (ವಕ್ರಿ) | | | |
| ರಾಹು | **Female** | | |
| | **26.10.51** | | ಚಂದ್ರ ಕುಜ ಶುಕ್ರ ಕೇತು |
| | ಬುಧ | ರವಿ | ಶನಿ |

ಈ ಜಾತಕದಲ್ಲಿ ರವಿ ಶುಕ್ರ ಪರಿವರ್ತನೆಆಗಿದೆ ಜಾತಕೀಯು ೬೫–೬೬ ವರ್ಷದವಳಾಗಿದ್ದು ಜೀವನದಲ್ಲಿ ಅನೇಕ ಗುರುತರನಾದ ಕಷ್ಟಗಳು ಬಂದಿದ್ದರೂ ಅವುಗಳನೆಲ್ಲಾ ಎದುರಿಸಿರುವವರಾಗಿರುತ್ತಾರೆ.

ಅಲ್ಲದೆ ಅಂತಹ ಸಂದರ್ಭದಲ್ಲೂ ಯಾವುದೇ ಆರೋಗ್ಯ ತೊಂದರೆ ಆಗಿರಲಿಲ್ಲವಂತೆ. ಆರೋಗ್ಯವೇ ನನ್ನ ಬಳಿ ಇರೋ ಭಾಗ್ಯ ಎಂದು ಹೇಳುತ್ತಿದ್ದರೂ ಸಹ. ಕೇವಲ ಜ್ವರ, ತಲೆನೋವು ಬಿಟ್ಟು ಯಾವುದೇ ಕಾಯಿಲೆಗಳು ಇರಲಿಲ್ಲ.

ಆದರೆ 2000 – 2001 ರಲ್ಲಿ ಗೋಚಾರದ ರಾಹು ಧನುಸ್ಸಿನಲ್ಲಿ ಇದ್ದು ಪರಿವರ್ತನೆಗೊಂಡಿದ್ದ ರವಿಯನ್ನು 5 ನೇ ಮನೆಯಲ್ಲಿ ಸಂಧಿಸುತ್ತಾನೆ. ಹಾಗಾಗಿ ಆರೋಗ್ಯಕಾರಕ ರವಿ ಯನ್ನು ರಾಹು ನುಂಗುತ್ತಾನೆ. ಅಲ್ಲದೆ ರವಿ ಯ ಜೊತೆ ಚಂದ್ರ ಕುಜ ಇದ್ದು ರಕ್ತ ಚಲನೆಯಲ್ಲಿ ಏರುಪೇರಾಗಿ B.P ಬಂದಿರುತ್ತೆ.

ಈಗ ಅಂದ್ರೆ 2016 Sep – oct ನಲ್ಲಿ ಮತ್ತೆ ರಾಹು, ರವಿ ಸ್ಥಾನದಲ್ಲೇ ಬಂದು ಆರೋಗ್ಯ ತೊಂದರೆ ನೀಡಿದ್ದಾನೆ. ಅಲ್ಲದೆ ಕಾಲ್ಪನಿಕ ಶನಿ ವೃಶ್ಚಿಕಕ್ಕೆ ಬಂದಿದ್ದು ಅಲ್ಲದೆ ಕಾಲ್ಪನಿಕ ರಾಹು ಬಂದಿದ್ದಾನೆ. ಅಂತೆಯೇ ಶನಿ ಯ ೭ ನೇ ಮನೆಯಲ್ಲಿ ಕೇತು ಇದ್ದು ಅಲ್ಲಿ ರಾಹು ಶನಿ, ಶನಿ ಕೇತು ಸಂಯೋಗವಾಯ್ತು. ಹಾಗಾಗಿ ರಾಹು ಕರ್ಮವನ್ನು ನುಂಗಿದ, ಶನಿ ಕರ್ಮವನ್ನು ಅನುಭವಿಸಲು ಕೇತು ವಿನ ಹಹತ್ತಿರ ಸಿಕ್ಕಿಹಾಕಿಕೊಂಡ.

ಹಾಗಾಗಿ ಶನಿ ಕೇತು ಸಂಚಿತ ಕರ್ಮದಂತೆ ಮತ್ತು ಸ್ಥಿತ ರವಿ ಯ ಮೇಲೆ ಗೋಚಾರದ ರಾಹು ವನಿಂದ ಸ್ತನಕ್ಯಾನ್ಸರ್ ಆಗಿ ಆಪರೇಷನ್ ಆಯಿತು.

# ಜಾತಕ ವಿಶ್ಲೇಷಣೆ-09

**(ಗೋಚಾರದ) ಸ್ಥಿತ ರವಿಯ ಮೇಲೆ ಕೇತು ವಿನ ಪ್ರಭಾವ.**

| | | | |
|---|---|---|---|
| ಬುಧ | ರವಿ | ಚಂದ್ರ ಕೇತು | ಶನಿ ಕುಜ |
| ಶುಕ್ರ ಗುರು | ಶ್ರೀಕಾಂತ್ 24-4-74 | | |
| | | | |
| | ರಾಹು | | |

ಈ ಜಾತಕನು private company ಕೆಲಸ ಮಾಡುತ್ತಿದ್ದು.

- 2014 july ತಿಂಗಳಲ್ಲಿ ಮೊದಲು ಕಟ್ಟಿದ ಮನೆಯ ಸಾಲದ instllment ಕಟ್ಟಲು ಆಗದೇ ಕಾರನ್ನು ಮಾರಿದರು.
- ಎರಡನೇ ಮನೆಯನ್ನು ಪೂರ್ಣಗೊಳಸಲು ಆಗದಿದ್ದಾಗ ಮನೆಯ ಒಡವೆ ಮತ್ತು ಹೆಂಡತಿಯ ಮಾಂಗಲ್ಯ ಸಮೇತ ಅಡವಿಟ್ಟಿದ್ದರು.

ಇದನ್ನು ಅವರ ಜಾತಕದಲ್ಲಿ ಪರಿಶೀಲಿಸಿದರೆ ಜಾತಕದ ರವಿ ಸ್ಥಾನಕ್ಕೆ 2014 july ವೇಳೆಯಲ್ಲಿ ಗೋಚಾಋದ ಕೇತು ಇದ್ದು ಶುಕ್ರ (ಒಡವೆಕಾರಕ) ಗುರು (ಧನಕಾರಕ) ರನ್ನು ತಡೆ ಹಾಕಿದ್ದಾನೆ. (ಇ.ಶ ರಲ್ಲಿಕೇತು ರಾಹು)
ಇನ್ನೊಂದು ವಿಚಾರ ಅಂದ್ರೆ ಶುಕ್ರ = ಮನೆಕಾರಕ ಗುರು = ವಿಸ್ತಾರಣೆಕಾರಕ ಇದಕ್ಕೆ ಕೇತು ತಡೆ ಹಾಕುತ್ತಾನೆ.
ಅಲ್ಲದೆ ರಿಪೇಮೆಂಟ್, ಮೇಲ್ವಿಚಾರಣೆ ಕಾರಕ, ಹೆಸರು, ಕೀರ್ತಿ ಕಾರಕ ರವಿಯನ್ನು ಕೇತು ಬಾಲದಲ್ಲಿ ಕಟ್ಟಿ ಹಾಕುವುದರಿಂದ ಅವೆಲ್ಲ ಕಾರಕತ್ವಕ್ಕೆ ಆಗಿರುತ್ತೆ.

ಆದರೆ 2016 ರ ಪ್ರಾರಂಭದ ವೇಳೆಗೆ ಅವರ ನಿಂತ ಕಾರ್ಯಗಳೆಲ್ಲಾ ಮುಗಿಸಿ ಮನೆ ಬಾಡಿಗೆ ಕೊಟ್ಟು ಹಣವನ್ನು ಗಳಸುತ್ತಿದ್ದಾರೆ. (ಕಾರಣ ಕಾಲ್ಪನಿಕ ಗುರು ಸಿಂಹಕ್ಕೆ ಬಂದಿರುತ್ತಾನೆ ಅಲ್ಲಿಗೆ ಸ್ಥಿತ ರವಿ ಕಾಲ್ಪನಿಕ ಗುರು ಸಂಬಂಧ ಬಂದಿರುತ್ತೆ)

ರವಿ ಮೇಲೆ ಕೇತು ಸಂಚಾರದ ತನಕ ಮಾತ್ರ ತೊಂದರೆ ಅನುಭವಿಸಿ ನಂತರ ಸಂಚಿತಾ ಕರ್ಮದಂತೆ ಫಲ ಪಡೆಯುತ್ತಾರೆ.